**ಅಸಲು ದಾವ ಸಂಖ್ಯೆಃ 292/2022**

**ಪಿ.ಡಬ್ಲೂ -1**

ದಿಃ 28-10-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ ಎಸ್ ವಿ ಜಿ ರವರಿಂದಃ-**

1. ಜಿ ಪಿ ಸಂಖ್ಯೆ 3/ಎ/1 ರಲ್ಲಿ ಕಟ್ಟಿರುವ ಮನೆಯು ನನ್ನ ಸಹೊದರನಾದ ಮಹಾದೇವ ಸಾವಗಾಂವಕರ ರವರ ಹೆಸರಿನಲ್ಲಿ ಇರುತ್ತದೆ ಹಾಗೂ ಅವರ ಹೆಸರಿನಲ್ಲಿ 2002 ರಲ್ಲಿ ಉತಾರ ನೀಡಲಾಗಿದೆ ಎಂದರೆ ಸರಿ. ಸಾಕ್ಷಿ ಮಂದುವರೆದು ಆಗ ಸದರಿ ಜಾಗದಲ್ಲಿ ಹಳೆಯ ಮನೆ ಇತ್ತು ಎಂದು ನುಡಿಯುತ್ತಾರೆ. ಸಾಕ್ಷಿಯು ಸದರಿ ಉತಾರವನ್ನು ನೋಡಿ ಗುರುತಿಸಿದ ಕಾರಣ ಅದನ್ನು ನಿಡಿ-2 ಎಂದು ಗುರುತಿಸಲಾಯಿತು. ಗ್ರಾಮೀಣ ಪ್ರದೇಶದಲ್ಲಿ ಮನೆ ಕಟ್ಟಲು ರಾಜ್ಯ ಸರ್ಕಾರವು ಪಂಚಾಯಿತಿ ಮುಖಾಂತರ ಅನುದಾನ ಕೊಡುತ್ತಿದ್ದರು ಎಂದರೆ ಸರಿ. 2001 ನೇ ಇಸವಿಯಲ್ಲಿ ಜುಲೈ 11ನೇ ತಾರೀಕು ಪ್ರತಿವಾದಿಯ ಹೆಸರಿಗೆ ಮನೆ ಕಟ್ಟುವ ಸಲುವಾಗಿ 10,000/- ರೂ.ಗಳ ಅನುದಾನ ನೀಡಲಾಗಿತ್ತು ಹಾಗೂ ನಾನು ಈಗ ಸದರಿ ದಾಖಲೆಯನ್ನು ನೋಡುತ್ತಿದ್ದೇನೆ ಎಂದರೆ ಸರಿ. ಸಾಕ್ಷಿ ಅದನ್ನು ನೋಡಿ ಒಪ್ಪಿದ ಕಾರಣ ಅದನ್ನು ನಿಡಿ-3 ಎಂದು ಗುರುತಿಸಲಾಯಿತು. ನಿಡಿ-3 ರ ಪ್ರಕಾರ ಸದರಿ ಅನುದಾನವನ್ನು ಮನೆ ನಂಬರ 3, ಹಂಗರಗಾ ಗ್ರಾಮ ಪಂಚಾಯತಿ ರವರು ನೀಡಿರುತ್ತಾರೆ ಎಂದು ನಮೂದು ಮಾಡಲಾಗಿದೆ ಎಂದರೆ ಸರಿ. ಸದರಿ ಅನುದಾನದಂತೆ ಮನೆಯನ್ನು ಕಟ್ಟಲಾಗಿದೆ ಎಂದರೆ ಸರಿ.ಸದರಿ ಮನೆಗೆ ವಿದ್ಯುತ್ ಸಂಪರ್ಕ ಪಡೆಯಲಾಗಿತ್ತು ಅದರ ಕಡೆಗೆ ವಿದ್ಯುತ್ ಬಿಲ್‌ಗಳನ್ನು ಸಹ ಪಾವತಿ ಮಾಡಲಾಗುತ್ತಿದೆ ಎಂದರೆ ಸರಿ. ಸಾಕ್ಷಿ ಈಗ ಸದರಿ ವಿದ್ಯುತ್ ಬಿಲ್ ನ್ನು ನೋಡಿ ಒಪ್ಪಿಕೊಂಡಿದ್ದು ಅದನ್ನು ನಿಡಿ-4 ಎಂದು ಗುರುತಿಸಲಾಯಿತು. ಆ ಪ್ರಕಾರ ಪ್ರತಿವಾದಿಯು ಜಿ ಪಿ ಸಂಖ್ಯೆ 3/ಎ/1 ರ ಮನೆಯ ಕಬ್ಜೆಯಲ್ಲಿ ಇರುತ್ತಾರೆ ಎಂದರೆ ಸಾಕ್ಷಿಯು ಪ್ರತಿವಾದಿ ಅವರ ಜಾಗದ ಕಬ್ಜೆಯಲ್ಲಿ ಇರುತ್ತಾರೆ ಎಂದು ನುಡಿಯುತ್ತಾರೆ.

2. ಸರ್ವೆ ನಂಬರ 172, 39, 70, 70/2 ರಂತೆ ಕೃಷಿ ಜಮೀನುಗಳು ಹಂಗರಗಾದಲ್ಲಿ ಇರುತ್ತವೆ ಎಂದರೆ ಸರಿ. ಸದರಿ ಜಮೀನುಗಳಲ್ಲಿ 4 ಎಕರೆ 33 ಗುಂಟೆ, 3 ಎಕರೆ 36 ಗುಂಟೆ, 6 ಎಕರೆ 5 ಗುಂಟೆ ಹಾಗೂ 5 ಎಕರೆ 12 ಗುಂಟೆ ಕ್ರಮವಾಗಿ ಇರುತ್ತವೆ ಎಂದರೆ ಸರಿ. ನನ್ನ ಪ್ರಕಾರ ಸದರಿ ಜಮೀನುಗಳಲ್ಲಿ ವಿಭಾಗವಾಗಿ ಅವರ ಅವರ ಹಿಸ್ಸೆಗೆ ಬಂದ ಜಮೀನಿನಲ್ಲಿ ಪ್ರತಿಯೊಬ್ಬರು ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿ. ಸದರಿ ಆಸ್ತಿಗಳನ್ನು ಈ ದಾವೆಯಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಸದರಿ ಜಮೀನುಗಳು ಸಾವಗಾಂವಕರ ಕುಟುಂಬದ ಜಮೀನುಗಳು ಆಗಿರುತ್ತವೆ ಎಂದರೆ ಸರಿ. ಈ ಜಮೀನುಗಳಲ್ಲಿ ಯಾವುದೇ ವಿಭಾಗ ಆಗಿರುವುದಿಲ್ಲ. ಸದರಿ ಜಮೀನುಗಳಲ್ಲಿ ಸರ್ವೆ ನಂಬರ 39, 172 ಮತ್ತು 70 ರಲ್ಲಿ ನಾನು ಬೇರೆ ಉಳುಮೆ ಮಾಡುತ್ತೇನೆ. ಸದರಿ ಸರ್ವೆ ನಂಬರ 39, 172 ಮತ್ತು 70 ರಲ್ಲಿ ನಾನು ಅಂದಾಜು ಒಟ್ಟು ಒಂದೂವರೇ ಎಕರೆ ಜಮೀನಿನಲ್ಲಿ ವ್ಯವಸಾಯ ಮಾಡುತ್ತೇನೆ. ಆ ರೀತಿ ನಾನು ಸುಮಾರು 25 ರಿಂದ 30 ವರ್ಷಗಳಿಂದ ಬೇರೆ ವ್ಯವಸಾಯ ಮಾಡುತ್ತಿದ್ದೇನೆ.

3. ನನ್ನ ತಂದೆ 1987 ರಲ್ಲಿ ಮರಣ ಹೊಂದಿರುತ್ತಾರೆ. ನನ್ನ ತಾಯಿ ಸುಮಾರು 5 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ನನ್ನ ತಂದೆ ತೀರಿಕೊಂಡ ನಂತರ ನಾವು ಬೇರೆ ಬೇರೆಯಾಗಿರುತ್ತೇವೆ. ನನ್ನ ಪ್ರಕಾರ ನಮ್ಮ ಕುಟುಂಬದ ಬೇರೆ ಜಮೀನುಗಳಲ್ಲಿ ನನ್ನ ತಂದೆಯ ಸಹೋದರರು ಈಗಾಗಲೇ ವಿಭಾಗ ಮಾಡಿಕೊಂಡಿರುತ್ತಾರೆ ಹಾಗೂ ಅವರ ಜಮೀನುಗಳಲ್ಲಿ ಬೇರೆ ವ್ಯವಸಾಯ ಮಾಡಿಕೊಂಡಿರುತ್ತಾರೆ. ನನ್ನ ಸಹೋದರ ಎಂದರೆ ಪ್ರತಿವಾದಿಗೆ ಸರ್ವೆ ನಂಬರ 39 ರಲ್ಲಿ 1 ಎಕರೆ 12 ಗುಂಟೆಯಷ್ಟು ಜಮೀನು ಇರುತ್ತದೆ ಎಂದರೆ ಸಾಕ್ಷಿ ಅಷ್ಟು ಇಲ್ಲ ಎಂದು ನುಡಿಯುತ್ತಾರೆ. ಈಗ ಸದ್ಯಕ್ಕೆ ಪ್ರತಿವಾದಿಯ ಕಬ್ಜೆಯಲ್ಲಿ ಕಡಿಮೆ ಜಮೀನು ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರ ಕಬ್ಜೆಯಲ್ಲಿ ಹೆಚ್ಚು ಜಮೀನು ಇರುತ್ತದೆ ಎಂದು

ನುಡಿಯುತ್ತಾರೆ. ಜಿ ಪಿ ಸಂಖ್ಯೆ 3/ಎ/1 ಎಂದರೆ ದಾವಾ ಸ್ವತ್ತಿಗೆ ನಮ್ಮ ತಂದೆ ತೀರಿಕೊಂಡ ನಂತರ ಅದರ ಉತಾರದಲ್ಲಿ ಪ್ರತಿವಾದಿಯ ಹೆಸರು ನಮೂದು ಆಗಿರುತ್ತದೆ ಎಂದರೆ ಸಾಕ್ಷಿಯು ಕೇವಲ ಹಳೆಯ ಮನೆಯ ಉತಾರದಲ್ಲಿ ಮಾತ್ರ ಪ್ರತಿವಾದಿಯ ಹೆಸರು ನಮೂದಾಗಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಒಂದೇ ಉತಾರ ಇರುತ್ತದೆ ಎಂದರೆ ಸರಿ. ನನ್ನ ಹೆಸರಿನಲ್ಲಿ ದಾವಾ ಸ್ವತ್ತಿನ ಉತಾರ ಇರುತ್ತದೆ ಎಂದು ತೋರಿಸಲು ನಾನು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಪ್ರತಿವಾದಿಯು ಅರ್ಜಿ ನೀಡಿದ ಮೇರೆಗೆ ದಾವಾ ಸ್ವತ್ತನ್ನು ಪಂಚಾಯತಿಯವರು ಅಳತೆ ಮಾಡಿರುತ್ತಾರೆ ಎಂದರೆ ಸರಿ. ಪಂಚಾಯತಿಯವರು ಸ್ಥಳ ವೀಕ್ಷಣೆ ಮಾಡಿ ಜಾಗವನ್ನು ಅಳತೆ ಮಾಡಿದ ನಂತರ ಅಲ್ಲಿ ಮನೆ ಕಟ್ಟುವ ಸಲುವಾಗಿ ಪ್ರತಿವಾದಿಗೆ ಪರವಾನಿಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿನ ಕಬ್ಜೆಯಲ್ಲಿ ಇರುತ್ತೇನೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿರುತ್ತೀನಾ ಎಂದರೆ ಸಾಕ್ಷಿಯು ತಾನು ತನ್ನ ತಂದೆಯ ಹೆಸರಿಗೆ ಆಗಿರುವ ಕ್ರಯ ಪತ್ರ ಹಾಜರುಪಡಿಸಿರುವುದಾಗಿ ನುಡಿಯುತ್ತಾರೆ.

**ಈ ಹಂತದಲ್ಲಿ ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**Sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**
**ಬೆಳಗಾವಿ.**